

ಬಿ.ಕೆ. ದೇವರಾವ್ ಅವರ ಸಂಗ್ರಹದಲ್ಲಿರುವ ವಿವಿಧ ತಳಿಗಳ ಭತ್ತ



ಅದನ್ನು ಹೇಗೋ ಈ ಬಾರಿ ಸರಿ ಮಾಡಿಕೊಂಡು ಕೃಷಿ ಮುಂದುವರೆಸಿದ್ದೇವೆ. ಆದರೆ ಈ ಬಾರಿ ಮಳೆಗಾಲವೇ ತಡವಾಗಿ ಶುರುವಾಯಿತು. ಸಾಮಾನ್ಯವಾಗಿ ನಾವು ಮಸ್ಸೂರಿ, ರಾಜಕಯಮೆ, ಗಂಧಸಾಲೆ, ಜೀರ್‌ಸಾಲೆ ಮುಂತಾದ ದೀರ್ಘಾವಧಿ ಬೆಳೆಯನ್ನು ಮೇ ತಿಂಗಳಲ್ಲೇ ಬಿತ್ತನೆ ಮಾಡುತ್ತೇವೆ. ಇವುಗಳನ್ನು ಬೆಳೆಯಲು ಐದು ತಿಂಗಳು ಬೇಕಾಗುತ್ತದೆ. ಈ ಸಾರಿ ತಡವಾಗಿ ಬಿತ್ತಿದೆವು. ಮಳೆ ಬಾರದೇ ಆತಂಕವಾಯಿತು. ಪಂಪ್‌ನಲ್ಲಿ ನೀರು ಹಾಯಿಸಿ, ಇನ್ನೇನು ಭತ್ತ ತೆನೆಯೊಡೆಯಿತು ಎಂದು ಖುಷಿ ಪಡೋಣವೆಂದರೆ ಈಗ ಕೊಯ್ಲಿನ ಸಮಯಕ್ಕೆ ಮತ್ತೆ ಮಳೆ ಬರುತ್ತಿದೆ. 'ಉತ್ತರೆಯಲ್ಲಿ ಮಳೆ ಬಂದರೆ ಎಲ್ಲ ಒತ್ತರೆ' (ಒತ್ತರೆ=ಸಪಾಟು) ಎಂಬ ಗಾದೆಯೇ ಇದೆಯಲ್ಲ. ಏನಾಗುತ್ತದೊ ನೋಡೋಣ...' ಎನ್ನುವ ದೇವರಾವ್ ಅವರ ಮಾತುಗಳಲ್ಲಿ, ಬಂದದ್ದನ್ನು ಬಂದಂತೆ ಎದುರಿಸಲು ಸಿದ್ಧ ಎನ್ನುವ ತಾತ್ವಿಕತೆ ಕಾಣಿಸುತ್ತದೆ.

## ತಳಿ ಸಂರಕ್ಷಣೆಗಾಗಿ ಸಂಖ್ಯಾಕೋಲು

ಸಂಗ್ರಹಿಸಿದ ಭತ್ತದ ಬೀಜಕ್ಕೆ ಒಂದು ಸಂಖ್ಯೆಯನ್ನು ನೀಡಿ, ಅದನ್ನು ಹದವಾದ ಬೆಚ್ಚನೆಯ ಜಾಗದಲ್ಲಿ ಕಾಪಿಡುವುದರೊಂದಿಗೆ ಸಂರಕ್ಷಣೆಯ ಪ್ರಕ್ರಿಯೆ ಆರಂಭವಾಗುತ್ತದೆ. ದೀರ್ಘಾವಧಿ, ಮಧ್ಯಮಾವಧಿ ಮತ್ತು ಅಲ್ಪಾವಧಿ ಬೆಳೆಯ ಬೀಜಗಳನ್ನು ಪ್ರತ್ಯೇಕಿಸಿ, ದೀರ್ಘಾವಧಿ ಬೆಳೆಯ ಬೀಜಗಳನ್ನು ಮೇ ಮೊದಲ ವಾರದಲ್ಲಿಯೇ ಬಿತ್ತನೆಗೆ ಸಿದ್ಧಮಾಡಲಾಗುತ್ತದೆ. ಒಂದು ಕೋಲಿಗೆ ಬೀಜದ ಸಂಖ್ಯೆಯನ್ನು ಅಂಟಿಸಿ, ಬೀಜಪೋಷಣೆ ಮಾಡಲಾಗುತ್ತದೆ. ಮೊಳಕೆಯೊಡೆದ ನಂತರ ಅದನ್ನು ಪುಟ್ಟದೊಂದು ಜಾಗದಲ್ಲಿ ಬಿತ್ತನೆ ಮಾಡಿ, ಸಂಖ್ಯೆಯಿರುವ ಕೋಲನ್ನು ಗದ್ದೆಯಲ್ಲಿ ಊರುತ್ತಾರೆ. ಭತ್ತದ ಸಸಿಗಳನ್ನು ಮತ್ತೆ ನಾಟಿ ಮಾಡುವಾಗಲೂ ಈ ಕೋಲನ್ನು ಜಾಗರೂಕತೆಯಿಂದ ಮರುನೆಡಲಾಗುತ್ತದೆ. ಹೀಗೆ ಹತ್ತಾರು ತಳಿಗಳನ್ನು ಬಿತ್ತನೆ ಮಾಡಿ, ಅದರಿಂದ ಫಸಲು ತೆಗೆದು, ಮತ್ತೆ ಒಳ್ಳೆಯ ಭತ್ತವನ್ನು ಸಂಗ್ರಹಿಸಿ ಆ ತಳಿಯು ಮುಂದುವರೆಯುವಂತೆ ಮಾಡಲಾಗುತ್ತದೆ.

ಕೊಯ್ಲಿನ ಸಂದರ್ಭದಲ್ಲಿ ಭತ್ತದ ಸಸಿಗಳ ಜೊತೆಗೆ ಸಂಖ್ಯಾಕೋಲೂ ಅಂಗಳಕ್ಕೆ ಬರುತ್ತದೆ. ದೊರೆತ ಭತ್ತದಲ್ಲಿ ಬೀಜಕ್ಕೆ ಅರ್ಹವಾದ ಕಾಳುಗಳನ್ನು ಆಯ್ದು, ಮತ್ತೆ ಬೆಚ್ಚನೆಯ ಜಾಗದಲ್ಲಿ, ಅದೇ ಸಂಖ್ಯೆಯೊಂದಿಗೆ ಪೊಟ್ಟಣ ಕಟ್ಟಿ ಕಾಪಿಡಲಾಗುತ್ತದೆ. 170ಕ್ಕೂ ಹೆಚ್ಚು ರೀತಿಯ ಭತ್ತದ ತಳಿಗಳು ಪರಸ್ಪರ ಅದಲಿ ಬದಲಿಯಾಗದೇ ಪ್ರತ್ಯೇಕವಾಗಿ ಉಳಿಯುವಂತೆ ಹೀಗೆ ಕಾಪಿಟ್ಟುಕೊಳ್ಳುವುದೇ ಸವಾಲಿನ ಕೆಲಸ. ಇತ್ತೀಚೆಗಿನ ವರ್ಷಗಳಲ್ಲಿ ನಮ್ಮ ಮನೆಗೆ ಬರುವ ಕಾರ್ಮಿಕರಿಗೂ ಈ ಕೆಲಸ ಅಭ್ಯಾಸವಾಗಿದೆ ಎನ್ನುತ್ತಾರೆ ದೇವರಾವ್ ಅವರ ಮಗ ಬಿ.ಕೆ. ಪರಮೇಶ್ವರ ರಾವ್. ಅವರು ಬಿಎಚ್‌ಇಎಲ್‌ನಲ್ಲಿ ಉದ್ಯೋಗಿಯಾಗಿದ್ದರು. ಕೃಷಿ ಪ್ರೀತಿಯು ಅವರಿಗೆ ಅಪ್ಪನಿಂದ ಬಂದ ಬಳುವಳಿ. ಕೆಲಸ ಬಿಟ್ಟು ಕೃಷಿಕಾಯಕವನ್ನೇ ನೆಚ್ಚಿಕೊಂಡಿದ್ದಾರೆ.

ದೇವರಾವ್ ಅವರು ತಮ್ಮ 20ನೇ ವಯಸ್ಸಿನಲ್ಲಿ ಕೃಷಿ ಕಾಯಕಕ್ಕೆ ತಂದೆಗೆ ಹೆಗಲಾಗಿ ನಿಂತರು. ಆಗ ತಳಿ ಸಂರಕ್ಷಣೆ ಕಲ್ಪನೆಯೇ ಅವರಿಗಿರಲಿಲ್ಲ. ಆಗ ಭತ್ತದ ಬೀಜದ ಕೊಡು–ಕೊಳ್ಳುವಿಕೆ ಸಾಮಾನ್ಯವಾಗಿತ್ತು. ನಂತರದ ವರ್ಷಗಳಲ್ಲಿ ಬಳಕೆಗಾಗಿ ಬೀಜಗಳನ್ನು ಸಂಗ್ರಹಿಸಿದರು. 1988ರಲ್ಲಿ ಗದ್ದೆಗಳಿಗೆ ರಸಗೊಬ್ಬರ ಹಾಕಲಾರಂಭಿಸಿದರು. ಇಳುವರಿಯ ಬೆನ್ನು ಬಿದ್ದಾಗ ಭತ್ತದ ಬೀಜಗಳ ಸಾಮರ್ಥ್ಯ ಕುಗ್ಗುವುದು ಅರಿವಿಗೆ ಬಂದಾಗ ಅವರು ಮತ್ತೆ ಪಾರಂಪರಿಕ ಕೃಷಿ ಪದ್ಧತಿಗೆ ವಾಲಿದರು.

'ರಸಗೊಬ್ಬರ ಹಾಕುವುದಿಲ್ಲ ಎಂದ ಮಾತ್ರಕ್ಕೆ ನಮ್ಮದು ಸಾವಯವ ಕೃಷಿ ಎಂದು ಹೇಳುವುದು ಸಮಂಜಸವಲ್ಲ. ಸಾವಯವ ಕೃಷಿಯೆಂದರೆ ರಸಗೊಬ್ಬರ ಹಾಕದೇ ಇರುವುದಷ್ಟೇ ಆಗಿದೆ. ಪಾರಂಪರಿಕ ಕೃಷಿಯೆಂದರೆ ಅದೊಂದು ಸಮಗ್ರ ಜೀವನ ಪದ್ಧತಿ. ಗದ್ದೆಗಳಿಗೆ ಗೊಬ್ಬರ ಬೇಕೆಂದು ದನಗಳನ್ನು ಸಾಕುವುದು, ದನಗಳಿಗೆ ಹುಲ್ಲು ಬೇಕೆಂದು ಭತ್ತದ ಹುಲ್ಲನ್ನು ಜೋಪಾನ ಮಾಡುವುದು, ಮನೆಗೆ ಬೇಕಾದುದನ್ನು ಹಿತ್ತಲಲ್ಲಿಯೇ ಬೆಳೆಯುವುದು, ಬೆಳೆದ ಭತ್ತವನ್ನು ಬೇಯಿಸಿ ಇಲ್ಲಿಯೇ ಅಕ್ಕಿ ಮಾಡುವುದು, ನೀರಿನ ಒರತೆ ಕಾಪಾಡಿಕೊಳ್ಳುವುದು, ಗದ್ದೆಯ ಮಣ್ಣು ಹಾಳಾಗದಂತೆ ಜೋಪಾನ ಮಾಡುವುದು, ಗದ್ದೆಯ ಸತ್ವವು ವೃದ್ಧಿಸುವುದಕ್ಕೆ ಬೇಕಾದ ಗೊಬ್ಬರ ತಯಾರಿಕೆಗೆ ಸೊಪ್ಪುಗಳನ್ನು ಆಯ್ದು ಗೊಬ್ಬರ ಮಾಡಿಕೊಳ್ಳುವುದು... ಹೀಗೆ ಭತ್ತದ ಕೃಷಿಯೆಂದರೆ ಅದು ಹಣದಿಂದ ಅಳೆಯುವ ಒಂದು ವೃತ್ತಿಯಲ್ಲ. ಅದು ಪ್ರಕೃತಿಯೊಡನೆ ಸಾಮರಸ್ಯದಿಂದ ಬದುಕುವ ಸಮಗ್ರ ಜೀವನ ಪದ್ಧತಿ' ಎನ್ನುವುದು ಪರಮೇಶ್ವರ ಅವರ ಗ್ರಹಿಕೆ. 'ಭತ್ತದ ಬೆಳೆಯು ಹೆಚ್ಚು ನೀರನ್ನು ಬೇಡುತ್ತದೆ ಎಂಬ ನಂಬಿಕೆ ಇತ್ತೀಚೆಗೆ ಚಾಲ್ತಿಗೆ ಬಂದಿದೆ. ಆದರೆ ಈ ಭತ್ತದ ಕೃಷಿಯಿಂದಾಗಿ ಭೂಮಿಯಲ್ಲಿ ನೀರಿನ ಒರತೆಯನ್ನು ಅತ್ಯುತ್ತಮ ರೀತಿ ಸಂರಕ್ಷಿಸಿಕೊಳ್ಳಬಹುದು ಎಂಬುದನ್ನು ನಾನು ಕಂಡುಕೊಂಡಿದ್ದೇನೆ' ಎನ್ನುತ್ತಾರೆ.

ರಸಗೊಬ್ಬರ ಬಳಕೆ ಕೈ ಬಿಟ್ಟ ಮೇಲೆ ಜಮೀನು ಹಸನುಗೊಂಡು ಸಮರ್ಥ ಭತ್ತದ ಬೀಜಗಳನ್ನು ಕಾಪಾಡಿಕೊಳ್ಳುವುದು ಸಾಧ್ಯವಾಯಿತು. ಸಂಗ್ರಹಿಸಿದ ಬೀಜಗಳ ಸಂಖ್ಯೆಯೂ ಹೆಚ್ಚಾಯಿತು. ದೇವರಾವ್ ಅವರದ್ದು ನಿರೀಕ್ಷೆಗಳಿಲ್ಲದ ಹಾದಿ. 'ತಳಿ ಸಂರಕ್ಷಣೆ ಮಾಡುತ್ತಿದ್ದೇನೆ ಎಂದು ನನಗೆ ಗೊತ್ತಿರಲಿಲ್ಲ. ನನ್ನ ಕೆಲಸ ನಾನು ಮಾಡುತ್ತಿದ್ದೇನೆ' ಎನ್ನುತ್ತಾರೆ. ಅವರಿಗೀಗ 79ರ ಹರೆಯ.

ದಿನವಿಡೀ ಹೊಲದಲ್ಲೇ ಇರುವುದು ಅವರಿಗೆ ಪ್ರೀತಿ. ಮುಂಜಾನೆ ಯೋಗಾಸನ, ದೀರ್ಘಹೊತ್ತಿನ ಪೂಜೆ ಮತ್ತು ಕಜೆ ಅಕ್ಕಿಯ ಗಂಜಿ ಸೇವಿಸಿ ಹೊಲಗಳತ್ತ ಹೋದರೆ ನಂತರದ್ದು ಕೃಷಿಧ್ಯಾನ. 'ನಾನು ಚಿಕ್ಕವನಿದ್ದಾಗ ನವಿಲನ್ನು ಪಠ್ಯಪುಸ್ತಕದ ಚಿತ್ರದಲ್ಲಿ ಕಣ್ಣರಳಿಸಿ ನೋಡುತ್ತಿದ್ದೆ. ಈಗ ಗದ್ದೆಗಳ ತುಂಬಾ ನವಿಲುಗಳು ರಾಶಿ ರಾಶಿ ಬಂದು ಮುತ್ತಿಗೆ ಹಾಕುತ್ತಿವೆ. ಅವುಗಳನ್ನು ಓಡಿಸಿ ಸುಸ್ತಾಗಿಹೋಗಿದೆ. ಹಾವುಗಳೆಲ್ಲ ಮಾಯವಾಗಿ, ಮಣ್ಣಿನ ಸಾರ ಕಡಿಮೆಯಾಗುತ್ತಿದೆ. ಅಂದು ನಮ್ಮ ಮನೆಯ ಸುತ್ತಮುತ್ತ ಇನ್ನೂರು ಎಕರೆಗೂ ಹೆಚ್ಚು ವಿಸ್ತಾರದಲ್ಲಿ ಭತ್ತ ಬೆಳೆಯುತ್ತಿದ್ದರು. ಈಗ ನಮ್ಮ ಐದೆಕರೆ ಹೊಲ ಮತ್ತು ಆಸುಪಾಸಿನ ಮೂರ್‍ನಾಕು ಎಕರೆ ಹೊಲದಲ್ಲಿ ಮಾತ್ರ ಭತ್ತ ಬೆಳೆಯುತ್ತಿದ್ದೇವೆ. ನವಿಲುಗಳು ಮತ್ತೆಲ್ಲಿ ಹೋಗುತ್ತವೆ ಹೇಳಿ? ಎಲ್ಲಾ ಕಾಲದ ಚಕ್ರ...' ಎನ್ನುವ ದೇವರಾವ್‌ಗೆ ರೇಡಿಯೊ ಎಂದರೆ ಇಷ್ಟ. ಮೊಮ್ಮಕ್ಕಳು ಬಂದರೆ ಕ್ರಿಕೆಟ್ ಆಡುವರು. ಕಾಲಿಗೆ ಚಪ್ಪಲಿ ಹಾಕಿದ್ದೇ ಇಲ್ಲ. ಹೊಲದ ಕಡೆಗೋ, ಮಂಗಳೂರಿಗೋ, ದೆಹಲಿಗೋ... ಬರಿಗಾಲೇ ಸೈ.

ಪ್ರತಿಕ್ರಿಯಿಸಿ: feedback@sudha.co.in